**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ.ನಂಃ 83/ 2019**

**ಚಾಸಾ-11, ಪ್ರಾಸಾ-9**

| | | |
|---|---|---|
| ಸಾಕ್ಷಿದಾರರ ಹೆಸರು | : | ರಘು ಹೆಚ್.ಸಿ |
| ತಂದೆಯ ಹೆಸರು | : | ಚಲುವೇಗೌಡ ಹೆಚ್.ಟಿ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಆರಕ್ಷಕರು, ಹಾಸನ ಗ್ರಾಮಾಂತರ ಠಾಣೆ. |
| ವಾಸಸ್ಥಳ | : | ಹಾಸನ. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 16.12.2025**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2022 ರಿಂದ ಇಲ್ಲಿಯವರೆಗೆ ಹಾಸನದ ಗ್ರಾಮಾಂತರ ಪೋಲಿಸ ಠಾಣೆಯಲ್ಲಿ ಆರಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು 2014 ರಿಂದ 2022 ರ ತನಕ ಹಾಸನ ಬಡಾವಣೆ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ದಿಃ 23.11.2017 ರಂದು ನಾನು ಹಾಸನ ಬಡಾವಣೆ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ-22 ರವರು ಹಾಸನ ನಗರದಲ್ಲಿ ಕಳವು ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ತಿಳಿಸಿ, ನನ್ನನ್ನೂ ಹಾಗೂ ಚಾಸಾ-12 ರವನ್ನು ಕರೆದುಕೊಂಡು ಹಾಸನ ನಗರದ ಸುತ್ತಮುತ್ತ ದಸ್ತು ಮಾಡಿಕೊಂಡು, ಹಾಸನದ ಸ್ಟೇಡಿಯಂ ರಸ್ತೆಯ ಹತ್ತಿರ ಇರುವ ಎಂ.ಜಿ ರಸ್ತೆಯ ಹತ್ತಿರ ವಾಹನಗ ತಪಾಸಣೆಯನ್ನು ನಡೆಸುತ್ತಿರುವಾಗ ರಾತ್ರಿ 10 ಗಂಟೆಯ ಸಮಯಕ್ಕೆ ಮೂರು ಜನ ಒಂದು ನಂಬರ್ ಪ್ಲೇಟ್ ರಹಿತ ದ್ವಿಚಕ್ರ ವಾಹನದಲ್ಲಿ ಬರುತ್ತಿರುವುದನ್ನು ಗಮನಿಸಿ, ಚಾಸಾ-22 ರವರ ಮೌಖಿಕ ಆದೇಶದ ಮೇರೆಗೆ ಸದರಿ ವ್ಯಕ್ತಿಗಳನ್ನು ತಡೆದು ನಿಲ್ಲಿಸಿ ವಿಚಾರಿಸಲಾಗಿ, ಸದರಿ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಹಾಜರಿರುವ 1 ರಿಂದ 3 ನೇ ಆರೋಪಿರು ಎಂದು ತಿಳಿದು ಬಂತು. ಸದರಿ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ, ಅವರು ಮತ್ತೆ ಮೂರು ಜನರ ಜೊತೆ ಸೇರಿ ಸರಗಳ್ಳತನದ ಪ್ರಕರಣದಲ್ಲಿ ಭಾಗಿಯಾಗಿರುವುದು ತಿಳಿದುಬಂತು.

3. ನಂತರ ವಿಚಾರ ತಿಳಿಯಲಾಗಿ ದಿ: 14.11.2017 ರಂದು ಹಾಸನ ಗ್ರಾಮಾಂತರ ಠಾಣೆಯ ವ್ಯಾಪ್ತಿಗೆ ಬರುವ ನಂಜೇದೇವರ ಕಾವಲಿನ ಒಬ್ಬ ಹೆಂಗಸಿನ ಕತ್ತಿನ ಸರವನ್ನು ಕಳ್ಳತನ ಮಾಡಿರುವುದು ತಿಳಿದುಬಂತು. ಇನ್ನುಳಿದ ಮೂರು ವ್ಯಕ್ತಿಗಳು ನ್ಯಾಯಾಲಯದ ಮುಂದೆ ಹಾಜರಿರುವ 4 ರಿಂದ 6 ನೇ ಆರೋಪಿತರು ಎಂದು ತಿಳಿದು ಬಂತು. ಅದೇ ದಿನ ಅಂದರೆ ದಿ: 14.11.2017 ರಂದು ದರ್ಶನ್ ಹಾಗೂ ಇತರರು ಹಾಸನದ ಬಿ.ಎಮ್ ರಸ್ತೆ ಕರೀಗೌಡ ರೆಸಿಡೆನ್ಸಿ ಹತ್ತಿರ ಒಬ್ಬ ಹೆಂಗಸಿನ ಸರಗಳ್ಳತನ ಮಾಡಿರುವುದು ಸಹ ತಿಳಿದು ಬಂತು. ಅದೇ ದಿನ ರಾತ್ರಿ 10 ಗಂಟೆ ಸಮಯಕ್ಕೆ 3 ನೇ ಆರೋಪಿಯು ಹಾಸನದ ವಿದ್ಯಾ ನಗರದ ಹತ್ತಿರ ಇರುವ ಪಬ್ಲಿಕ್ ಟಿವಿ ಕಚೇರಿಯ ಹತ್ತಿರ ಒಬ್ಬ ಹೆಂಗಸು ಬೈಕ್ ನ ಹಿಂಭಾಗದಲ್ಲಿ ಕುಳಿತುಕೊಂಡು ಹೋಗುತ್ತಿರುವ ಸಮಯದಲ್ಲಿ ಆಕೆಯ ಸರವನ್ನು ಕಳ್ಳತನ ಮಾಡಿರುವುದು ಕಂಡು ಬಂತು. ನಂತರ ಅದೇ ದಿನ ಮದ್ಯರಾತ್ರಿ 2 ನೇ ಆರೋಪಿಯು ಹಾಸನದ ಚೆನ್ನವೀರಪ್ಪ ಮಂಡಿ ಹತ್ತಿರ ಒಬ್ಬ ವ್ಯಕ್ತಿಯ ಕತ್ತಿನ ಸರವನ್ನು ಕಳ್ಳತನ ಮಾಡಿರುವುದು ತಿಳಿದು ಬಂತು.

4. ಸಾಕ್ಷಿಯು ನಿಪಿ-13 ರ ಅಮಾನತು ಮಹಜರ ಕ್ರಮದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ಸದರಿ ಅಮಾನತು ಮಹಜರ ಕ್ರಮವನ್ನು ದಿ: 30.12.2017 ರಂದು ಚಾಸಾ-22 ರವರು ಈ ಪ್ರಕರಣದಲ್ಲಿ ಆರೋಪಿತರು ಬಳಸಿದ್ದ ದ್ವಿಚಕ್ರ ವಾಹನ ಹಾಗೂ ಮು.ಮಾ 1 ರ ವಸ್ತುವನ್ನು ಹಾಸನದ ಗ್ರಾಮಾಂತರಾ ಪೋಲಿಸರಿಗೆ ತಲುಪಿಸಿ ಬರಲು ತಿಳಿಸಿದ್ದ ಮೇರೆಗೆ ಅವುಗಳನ್ನು ತನಿಖಾಧಿಕಾರಿಗಳಿಗೆ ತಲುಪಿಸಿದ್ದು, ಈ ಸಂಬಂದ ತನಿಖಾಧಿಕಾರಿಗಳು ನಿಪಿ-13 ರ ಮೂಲಕ ಅವುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-4 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿ ಅಮಾನತುಪಡಿಸಿಕೊಂಡ ಸದರಿ ದ್ವಿಚಕ್ರ ವಾಹನ ಸಂಖ್ಯೆ KA-01-EH-4940 ಎಂಬ ಬಜಾಜ್ ಕಂಪನಿಯ ಪಲ್ಸರ್ ಬೈಕ ಎಂದು ಹೇಳಿರುತ್ತಾರೆ. ಸಾಕ್ಷಿಯು ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ.

5. 1 ರಿಂದ 3 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿದ್ದು, ಸಾಕ್ಷಿಯು ಅವರುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ. ಹೆಚ್.ಬಿ.ಎಸ್ ವಕೀಲರಿಂದಃ**

6. ಚಾಸಾ-22 ರವರ ಮೌಖಿಕ ಆದೇಶದ ಮೇರೆಗೆ ಆರೋಪಿತರನ್ನು ವಶಕ್ಕೆ ಪಡೆದಿರುತ್ತೇವೆ. ಚಾಸಾ-22 ರವರ ಆದೇಶದ ಮೇರೆಗೆ ನಮ್ಮ ಕರ್ತವ್ಯವನ್ನು ನಿರ್ವಹಿಸಿರುತ್ತೇವೆ. ದಿಃ 23.11.2017 ರಂದು ಯಾವುದೇ ಬೈಕನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ 1 ರ ಯಾವುದೇ ವಸ್ತುವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಬೈಕನ್ನೂ ಸಹ ವಶಕ್ಕೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ಹಾಗೂ 5 ನೇ ಆರೋಪಿತರ ಪರ ಶ್ರೀಮತಿ ಬಿ.ಸಿ ವಕೀಲರಿಂದಃ**

7. ಈ ಸಂದರ್ಭದಲ್ಲಿ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು, ಅನುಮತಿಸಿದೆ. ಮುಂದುವರೆದು, ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರನ್ನು ಇದೇ ಮೊದಲ ಬಾರಿಗೆ ನಾನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಂಬರ್ ರಹಿತ ದ್ವಿಚಕ್ರ ವಾಹನವನ್ನು ನಡೆಸಿಕೊಂಡು ಬರುತ್ತಿದ್ದರಿಂದ ಚಾಸಾ-22 ರವರ ಆದೇಶದ ಮೇರೆಗೆ ಅದನ್ನು ತಪಾಸಣೆ ಮಾಡಿರುತ್ತೇವೆ. ಚಾಸಾ-22 ರವರು ವಾಹನ ತಪಾಸಣೆ ಕಾರ್ಯದಲ್ಲಿ ನಿರತರಾಗಿದ್ದಾಗ ಆರೋಪಿತರನ್ನು ನೋಡಿ ನಮಗೆ ಮೌಖಿಕವಾಗಿ ವಿಚಾರಣೆ ಮಾಡಲು ತಿಳಿಸಿರುತ್ತಾರೆ. ಆರೋಪಿತರು ಯಾವುದೇ ವಾಹನವನ್ನು ನಂಬರ್ ಪ್ಲೇಟ್ ಇಲ್ಲದೆ ನಡೆಸಿಲ್ಲ, ಸದರಿ ವಿಚಾರವನ್ನು ಊಹಿಸಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಶಕ್ಕೆ ತೆಗೆದುಕೊಂಡ ದ್ವಿಚಕ್ರ ವಾಹನವು ದಕ್ಷಿಣ ದಿಕ್ಕಿನ ಕಡೆ ಇರುವ ಶಿವಣ್ಣ ಡಾಬಾ ಕಡೆಯಿಂದ ಬರುತ್ತಿತ್ತು. ಸದರಿ ಶಿವಣ್ಣ ಡಾಬಾವು ದಕ್ಷಿಣ ದಿಕ್ಕಿನಲ್ಲಿ ಬರುದಿಲ್ಲ ಎಂದರೆ ಸರಿಯಲ್ಲ. ವಿಚಾರಣೆ ನಡೆಸಿದ ಸ್ಥಳ ಏಕಮುಖ ರಸೆಯಾಗಿದ್ದು, ಪೋಲಿಸ ವಾಹನ ನಿಂತಿದ್ದರೆ ಎಲ್ಲರಿಗೂ ಕಾಣಸಿಗುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಪೋಲಿಸರು ತಪಾಸಣೆ ನಡೆಸುತ್ತಿದ್ದರೆ ಯಾವ ವ್ಯಕ್ತಿಯೂ ಸಹ ನಂಬರ್ ಪ್ಲೇಟ್ ಇಲ್ಲದೆ ಬರುವ ಧೈರ್ಯ ಮಾಡುವುದಿಲ್ಲ ಎಂದರೆ, ಸಾಕ್ಷಿಯು ಆರೋಪಿತರು ಬಂದಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ

ಆರೋಪಿಯು ಯಾವುದೇ ಸರಗಳ್ಳತನದಲ್ಲಿ ಭಾಗಿಯಾಗಿರುತ್ತೇನೆ ಎಂದು ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರ ವಿರುದ್ದ ಈ ಪ್ರಕರಣವನ್ನು ಸೃಷ್ಟಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಹೆಸರುಗಳು ನನಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಪ್ರಕರಣದ ಸಂಬಂದ ತಪ್ಪುಒಪ್ಪಿಕೊಂಡಿಲ್ಲ, ಬದಲಾಗಿ ನಾವೇ ಅವರುಗಳನ್ನು ಈ ಪ್ರಕರಣದಲ್ಲಿ ವಿನಾ ಕಾರಣ ಸಿಲುಕಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೂ ಸಹ ಯಾವುದೇ ಸಂಬದವಿಲ್ಲದಿದ್ದರೂ ಸಹ ಈ ಪ್ರಕರಣವನ್ನು ಕಟ್ಟುಕತೆಯಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-13 ರ ಮಹಜರ ಕ್ರಮದ ದಾಖಲೆಯನ್ನು ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ-22 ರವರು ನನಗೆ ನೀಡಿದ್ದ ಮು.ಮಾ 1 ರ ವಸ್ತುವು ಉಮಾಗೋಲ್ಡ ಎಂದು ತಿಳಿದುಬಂದಿತ್ತು. ನಿಪಿ-13 ರ ಮಹಜರ ಕ್ರಮವನ್ನು ಜರುಗಿಸುವ ಸಂದರ್ಭದಲ್ಲಿ ಮು.ಮಾ 1 ರ ವಸ್ತುವನ್ನು ಅಮಾನತುಪಡಿಸಿಕೊಂಡ ಸಂಬಂದ ಅದರ ಮೇಲೆ ಯಾವುದೇ ಸಹಿ ಮಾಡಿಲ್ಲ. ನಿಪಿ-13 ರ ಮಹಜರ ಕ್ರಮದ ಮೂಲಕ ಮು.ಮಾ 1 ರ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ ಹಾಗೂ ಅದನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎನ್ನುವ ಸಮಯದಲ್ಲಿ ನಾನು ಇರಲೇ ಇಲ್ಲ ಎಂದರೆ ಸರಿಯಲ್ಲ. ಚಾಸಾ-22 ರವರ ಕೋರಿಕೆಯ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಏನು ಬರೆದಿದೆ ಎಂಬುದನ್ನು ನಾನು ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 4 ಹಾಗೂ 6 ನೇ ಆರೋಪಿತರ ಪರ ಶ್ರೀ. ಟಿ.ಎಸ್.ಎಸ್ ವಕೀಲರಿಂದಃ**

ಈ ಸಂದರ್ಭದಲ್ಲಿ 1, 2 ಹಾಗೂ 5 ನೇ ಆರೋಪಿತರ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು, ಅನುಮತಿಸಿದೆ.

**ಪಾಟೀಸವಾಲುಃ 3 ನೇ ಆರೋಪಿ ಪರ ಶ್ರೀ. ಬಿ.ಇ.ಹೆಚ್ ವಕೀಲರಿಂದ ಶ್ರೀ. ಹೆಚ್.ಜೆ.ಆರ್ ವಕೀಲರ ಪರವಾಗಿಃ**

ಈ ಸಂದರ್ಭದಲ್ಲಿ 1, 2 ಹಾಗೂ 5 ನೇ ಆರೋಪಿತರ ಪರ ವಕೀಲರು ನಡೆಸಿದ ಪಾಟೀ

ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿದ್ದು, ಅನುಮತಿಸಿದೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,

ಹಾಸನ.